JUNE 22, 2025

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು:**

- **11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ; ಯೋಗ ಸಂಗಮದಲ್ಲಿ, ಸಾಮೂಹಿಕ ಯೋಗ ಪ್ರದರ್ಶನ.**
- **ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ, 'ಯೋಗ ಮಂದಿರ'ಗಳ ಸ್ಥಾಪನೆಗೆ, ರಾಜ್ಯ ಸರ್ಕಾರ, ಚಿಂತನೆ.**
- **ರಾಜ್ಯದ ಮಾವು ಬೆಳೆಗಾರರ ಸಮಸ್ಯೆಗಳನ್ನು, ಆದ್ಯತೆ ಮೇಲೆ ಪರಿಹರಿಸುವಂತೆ, ಕೇಂದ್ರ ಕೃಷಿ ಖಾತೆ ಸಚಿವರಿಗೆ, ರಾಜ್ಯದ ಮನವಿ.**
- **ದೇಶದ ಮೊಟ್ಟ ಮೊದಲ, ಮಾ ೆ ಮೇಕ್ಸ್ ಬಯೋಚಾರ್ ಘಟಕ, ಉಡುಪಿಯಲ್ಲಿ ಸ್ಥಾಪನೆ.**

<><><>

**ಈಗ ವಾರ್ತೆಗಳ ವಿವರ**

<><><>

**'ಒಂದೇ ಭೂಮಿ ಹಾಗೂ ಒಂದೇ ಆರೋಗ್ಯಕ್ಕಾಗಿ, ಯೋಗ'ಧ್ಯೇಯದೊಂದಿಗೆ, 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಭಾರತದ 100 ಐತಿಹಾಸಿಕ ತಾಣಗಳುಹಾಗೂ 50ಕ್ಕೂ ಹೆಚ್ಚು ಸಾಂಸ್ಕೃತಿಕ ಸ್ಥಳಗಳಲ್ಲಿ, ಯೋಗ ಸಂಗಮ – ಸಾಮೂಹಿಕ ಯೋಗ ಪ್ರದರ್ಶನದಲ್ಲಿ, ಜನ ಸ್ವಯಂ ಪ್ರೇರಣೆಯಿಂದ ಪಾಲ್ಗೊಂಡರು.**

<><><>

**ಯುನೆಸ್ಕೊ ವಿಶ್ವ ಪರಂಪರೆ ತಾಣ, ಬಾಗಲಕೋಟೆ ಜಿಲ್ಲೆ, ಬಾದಾಮಿ ತಾಲೂಕು, ಪಟ್ಟದಕಲ್‌ನಲ್ಲಿ ನಡೆದ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಭಾಗವಹಿಸಿದ್ದರು.**

<><><>

**ಧಾರವಾಡ ವಲಯದ, ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ, ವಿಜಯಪುರದ ಗೋಲ ಗುಮ್ಮಟದ ಆವರಣದಲ್ಲಿ, ಯೋಗ ಪ್ರದರ್ಶನ ಆಯೋಜಿಸಿತ್ತು.**

<><><>

ರಾಜ್ಯದ ಎಲ್ಲ ನ್ಯಾಯಾಲಯಗಳಲ್ಲಿ, ಯೋಗಾಭ್ಯಾಸವನ್ನು ಅಳವಡಿಸಿಕೊಳ್ಳಲು ನಿರ್ದೇಶಿಸಿದ್ದಾಗಿ, ಉಚ್ಚ ನ್ಯಾಯಾಲಯದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ. ಕಾಮೇಶ್ವರ ರಾವ್, ಬೆಂಗಳೂರಿನಲ್ಲಿ ತಿಳಿಸಿದ್ದಾರೆ.

<><><>

ಯೋಗ ಸಾಧನೆಯಿಂದಾಗಿ, ಇಡೀ ಜಗತ್ತಿಗೆ ಭಾರತ ಇಂದು, ಅತ್ಯುತ್ತಮ ಚಿಕಿತ್ಸೆ ತಾಣವಾಗಿ, ರೂಪುಗೊಂಡಿದೆ ಎಂದು, ಪ್ರಧಾನಮಂತ್ರಿ ನರೇಂದ್ರ ಮೋದಿ, ತಿಳಿಸಿದ್ದಾರೆ. ಆಂಧ್ರ ಪ್ರದೇಶದ, ವಿಶಾಖಪಟ್ಟಣಂ'ನ, ಶ್ರೀ ರಾಮಕೃಷ್ಣ ಪರಮಹಂಸ ಕಡಲ ತೀರದಲ್ಲಿ ಆಯೋಜಿಸಿದ್ದ, ಪ್ರಧಾನ ಯೋಗ ದಿನಾಚರಣೆ ಕಾರ್ಯಕ್ರಮ, 'ಯೋಗಾಂಧ್ರ'ದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 45 ಸೆಕೆಂದುಗಳು

<><><>

ರಾಜ್ಯದ ಎಲ್ಲ ಹಂತದ ಸರ್ಕಾರಿ ಆಸ್ಪತ್ರೆಗಳಲ್ಲಿ, 'ಯೋಗ ಮಂದಿರ'ಗಳನ್ನು ಸ್ಥಾಪಿಸಲಾಗುವುದು; ತನ್ಮೂಲಕ ಆರೋಗ್ಯಾಕಾಂಕ್ಷಿಗಳಿಗೆ, ಯೋಗದ ಲಾಭ ದೊರೆಯುವಂತೆ, ಯೋಜಿಸಲಾಗುವುದು ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ್ ತಿಳಿಸಿದ್ದಾರೆ. ಬೆಂಗಳೂರಿನ ವಿಧಾನಸೌಧದ ಎದುರು ಆಯೋಜಿಸಿದ್ದ, ಯೋಗ ಸಂಗಮ, ವಿಶೇಷ ಸಾಮೂಹಿಕ ಯೋಗ ಪ್ರದರ್ಶನ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು.

<><><>

ಮೈಸೂರನ್ನು ಯೋಗ ಜಿಲ್ಲೆಯನ್ನಾಗಿ ರೂಪಿಸುವತ್ತ, ಯೋಜನೆ ರೂಪಿಸಲಾಗಿದೆ. ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಮೈಸೂರು ಜಿಲ್ಲೆಯ ಪ್ರತಿ ಮನೆಯಲ್ಲಿ ಒಬ್ಬರಾದರೂ, ಯೋಗಭ್ಯಾಸ ನಡೆಸುವ ರೀತಿಯಲ್ಲಿ, ವ್ಯವಸ್ಥೆ ಕಲ್ಪಿಸಲು ಗುರಿ ಹೊಂದಲಾಗಿದೆ.

<><><>

ದೇಶದಲ್ಲಿಯೇ ಪ್ರಥಮ ಬಾರಿಗೆ ಹಾಗೂ ರಾಜ್ಯದ ಮಾದರಿಯಾಗಿ, ಒಂದು ಜಿಲ್ಲೆಯನ್ನು ಸಂಪೂರ್ಣ ಯೋಗ ಜಿಲ್ಲೆಯನ್ನಾಗಿ ರೂಪಿಸುವತ್ತ ಹೆಜ್ಜೆ ಇಟ್ಟಿದ್ದೇವೆ. ರಾಜ್ಯದಲ್ಲಿ ಪರಂಪರಾಗತವಾಗಿ ಬಂದ, ಅ ಷ್ಟಾಂಗ ಯೋಗಕ್ಕೆ, ಹೆಚ್ಚಿನ ಒತ್ತು ನೀಡಲಾಗುವುದು ಎಂದರು.

<><><>

'ಯೋಗ ಧನು ್' ಮೂಲಕ, ರಾಜ್ಯಾದ್ಯಂತ 5 ಲಕ್ಷ ಜನರಿಗೆ ಯೋಗ ಆಚಾರ ಪದ್ಧತಿ ಹೇಳಿಕೊಡಲಾಗಿದ್ದು, 5 ಸಾವಿರ ಸರ್ಕಾರಿ ಶಾಲೆಗಳಲ್ಲಿ, ಯೋಗ ಅಳವಡಿಸಿಕೊಳ್ಳಲು, ಕ್ರಮ ಕೈಗೊಳ್ಳಲಾಗಿದೆ ಎಂದು, ಸಚಿವ ದಿನೇಶ ಗುಂಡೂರಾವ್ ಹೇಳಿದರು.

<><><>

ಸ್ವಾತಂತ್ರ್ಯ ಹೋರಾಟಗಾರ,ಶತಾಯುಷಿ, ರಾಜೇಂದ್ರ ಧರಮಪ್ಪ ಕಲಘಟಗಿ ಅವರು, ಕಳೆದ 55 ವರ್ಷಗಳಿಂದ ಯೋಗಾಭ್ಯಾಸದಲ್ಲಿ ನಿರತರಾಗಿ, ತಮ್ಮ ಮನೋ-ದೈಹಿಕ ಸ್ವಾಸ್ಥ್ಯ ಕಾಪಾಡಿಕೊಂಡಿದ್ದಾರೆ. ಬೆಳಗಾವಿಯ, ಚನ್ನಮ್ಮನಗರದ

ನಿವಾಸಿಯಾಗಿರುವ, **105** ವರ್ಷಗಳ ಹಿರಿಯರು,ಪ್ರದೇಶ ಸಮಾಚಾರಕ್ಕಾಗಿ, ಯೋಗಾಭ್ಯಾಸದ ಮಹತ್ವ ಕುರಿತು, ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

**ಶತಾಯುಷಿ ರಾಜೇಂದ್ರ ಕಲಘಟಗಿ 45 ಸೆಕೆಂದುಗಳು**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ**

**ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.**

<><><>

ರಾಜ್ಯದ ಮಾವು ಬೆಳೆಗಾರರ ಮಾರುಕಟ್ಟೆ ಸವಾಲು ಮತ್ತುಬೆಲೆ ಕುಸಿತದ ಸಮಸ್ಯೆಗಳನ್ನು ಆದ್ಯತೆ ಮೇಲೆ ಪರಿಹರಿಸುವಂತೆ, ಕೇಂದ್ರ ಕೃಷಿ ಖಾತೆ ಸಚಿವ ಶಿವರಾಜಸಿಂಗ್ ಚೌವ್ಹಾಣ್ ಅವರಿಗೆ, ಮನವಿ ಸಲ್ಲಿಸಿದ್ದಾಗಿ, ಕೃಷಿ ಖಾತೆ ಸಚಿವ, ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ. ಕೇಂದ್ರ ಸಚಿವರೊಂದಿಗೆ, ವಿಡಿಯೋ ಸಂವಾದ ನಡೆಸಿ, **Price Deficiency Payment Scheme (PDPS)** ಅಡಿ, ಮಾವು ಖರೀದಿಸಲು, ಕ್ರಮ ಕೈಗೊಳ್ಳಲು ಕೋರಿದರು.

<><><>

ರಾಜ್ಯದಲ್ಲಿ **1** ದಶಾಂಶ **3-9** ಲಕ್ಷ ಹೆಕ್ಟರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದ್ದು, ವಾರ್ಷಿಕ, **8** ರಿಂದ **10** ಲಕ್ಷ ಮೆಟ್ರಿಕ್ ಟನ್ ಮಾವು, ಉತ್ಪಾದನೆಯಾಗುತ್ತದೆ.

<><><>

ಡೆನ್ಮಾರ್ಕ್‌ನ, ಮಾ ೯ ಮೇಕ್ಸ್ ಕಂಪೆನಿ ಸಹಯೋಗದಲ್ಲಿ, ಅಂದಾಜು **100** ಕೋಟಿ ರೂಪಾಯಿ ವೆಚ್ಚದಲ್ಲಿ, ಅತ್ಯಾಧುನಿಕ, ದೇಶದ ಮೊಟ್ಟ ಮೊದಲ, ಬಯೋಚಾರ್ ಘಟಕ, ಉಡುಪಿಯಲ್ಲಿ ನಿರ್ಮಾಣವಾಗಲಿದೆ ಎಂದು, ಕೈಗಾರಿಕೆಗಳ ಖಾತೆ ಸಚಿವ, ಎಂ.ಬಿ. ಪಾಟೀಲ ತಿಳಿಸಿದ್ದಾರೆ. ಸಮೃದ್ಧ ಇಂಗಾಲ ಹೊಂದಿರುವ, ಗೋಡಂಬಿ ಸಂಸ್ಕರಣೆ ತ್ಯಾಜ್ಯ ಬಳಸಿ, ಮಣ್ಣಿನ ಫಲವತ್ತತೆ ಸುಧಾರಿಸಲು, ಬಯೋಚಾರ್ ತಯಾರಿಸುವ ಘಟಕ ಶೀಘ್ರ ಕಾರ್ಯಾರಂಭಿಸಲಿದೆ. ಪರಿಸರ ಸ್ನೇಹಿ ಪರಿಹಾರಗಳನ್ನು ಅಭಿವೃದ್ಧಿ ಪಡಿಸುವ ಕಂಪೆನಿಯ ಪ್ರಯತ್ನದ ಲಾಭ ರಾಜ್ಯಕ್ಕೆ ಲಭಿಸಲಿದೆ ಎಂದು, ಎಕ್ಸ್ ಮಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

ಡೆನ್ಮಾರ್ಕ್ ಮೂಲದ, ಕೆ.ಕೆ. ವಿಂಡ್ ಸೊಲ್ಯುಷನ್ಸ್ ಬೆಂಗಳೂರಿನ ಯಶವಂತಪುರ ಹಾಗೂ ಡಾಬಸ್ ಪೇಟೆಯಲ್ಲಿ, ಗಾಳಿ ಯಂತ್ರಗಳ ತಯಾರಿಕಾ ಘಟಕ ಸ್ಥಾಪಿಸಲಿದೆ, ಎಂದಿದ್ದಾರೆ.

<><><>

ಇ–ಸ್ವತ್ತು ಆಸ್ತಿ ನೋಂದಾವಣಿಯಿಂದ, ರಾಜ್ಯದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ, 1 ಕೋಟಿ 45 ಲಕ್ಷ ಸಾರ್ವಜನಿಕ ಆಸ್ತಿಗಳು ಅಧಿಕೃತಗೊಂಡು, ಕಂದಾಯ ಆದಾಯ ಹೆಚ್ಚಲಿದೆ; ಗ್ರಾಮಗಳ ಅಭಿವೃದ್ಧಿ ಸಾಧ್ಯವಾಗಲಿದೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ್ ಖರ್ಗೆ, ಎಕ್ಸ್ ಮಾಧ್ಯಮದಲ್ಲಿ ತಿಳಿಸಿದ್ದಾರೆ. ವಿಧಾನ ಮಂಡಲ ಅಧಿವೇಶನದಲ್ಲಿ, ಇ–ಸ್ವತ್ತು ವಿತರಣೆಗೆ ಅನುವಾಗುವಂತೆ, 199 (ಬಿ) ನಿಯಮಗಳಿಗೆ ತಿದ್ದುಪಡಿ ತರಲಾಗಿದೆ. ಇ–ಸ್ವತ್ತು ವಿತರಣೆಯನ್ನು ಸುಗಮಗೊಳಿಸಲು, ನಿಯಮಗಳನ್ನು ಸಿದ್ಧಪಡಿಸಲಾಗುತ್ತಿದೆ. ಜುಲೈ 2ನೇ ವಾರದಲ್ಲಿ ಅಂತಿಮ ನಿಯಮಾವಳಿಗಳು ಪ್ರಕಟಗೊಳ್ಳಲಿವೆ ಎಂದಿದ್ದಾರೆ.

<><><>

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘ, ಇಂದು ಬೆಳಗ್ಗೆ 10:30ಕ್ಕೆ, 'ಕನ್ನಡ ಭಾಷೆಯ ಅಸ್ಮಿತೆ' ವಿಷಯವಾಗಿ, ಒಂದು ದಿನದ ವಿಚಾರ ಸಂಕಿರಣ ಆಯೋಜಿಸಿದೆ. ಅಂತಾರಾಷ್ಟ್ರೀಯ ಭಾಷಾ ತಜ್ಞ ಗಣೇಶ ಎನ್. ದೇವಿ, ಉದ್ಘಾಟಿಸಲಿದ್ದಾರೆ. ಧಾರವಾಡದ ಹಿರಿಯ ಭಾಷಾ ತಜ್ಞ ಸಂಗಮೇಶ ಸವದತ್ತಿಮಠ ಆಶಯ ನುಡಿಗಳನ್ನಾಡುವರು. ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಉಪ ಕುಲಪತಿ, ಎ.ಮುರಿಗೆಪ್ಪ ಅಧ್ಯಕ್ಷತೆ ವಹಿಸಲಿದ್ದು, ವಿದ್ಯಾವರ್ಧಕ ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ, ಸಂತೋಷ ಹಾನಗಲ್ ಅವರ ಕೃತಿಯನ್ನು, ಬಿಡುಗಡೆ ಮಾಡುವರು.

<><><>

ಗದಗ ಜಿಲ್ಲೆ, ಗಜೇಂದ್ರಗಡದ ರಾಜೂರಿನ, ಹಿರಿಯ ಸಂಶೋಧಕ, ಮಲ್ಲಿಕಾರ್ಜುನ ಕುಂಬಾರ ಅವರಿಗೆ ಕರ್ನಾಟಕ ವಿದ್ಯಾವರ್ಧಕ ಸಂಘ, ವೀರಣ್ಣ ರಾಜೂರ ದತ್ತಿ, 'ರಾಜಮಾರ್ಗ ಪ್ರಶಸ್ತಿ'ಯನ್ನು, ಇಂದು ಸಂಜೆ ೬.೩೦ಕ್ಕೆ ನೀಡಿ, ಗೌರವಿಸಲಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

PG CET-20'25: MBA MCAಕೋರ್ಸ್‌ಗಳ ಪ್ರವೇಶಾತಿಗೆ, ಇಂದು ಬೆಳಗ್ಗೆ 10.30 ರಿಂದ ರಾಜ್ಯದ 11 ಜಿಲ್ಲೆಗಳ, 68 ಕೇಂದ್ರಗಳಲ್ಲಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಲಿಖಿತ ಪರೀಕ್ಷೆ ನಡೆಸಲಿದೆ.

<><><>

ಹುಬ್ಬಳ್ಳಿಯ ಕೆ.ಎಂ.ಸಿ. ಆರ್.ಐ.ನಲ್ಲಿ ಚಿಕಿತ್ಸೆ ಪಡೆಯುತ್ತಿರುವ, ಮಾಜಿ ಸಂಸದ ಐ.ಜಿ. ಸನದಿ ಅವರನ್ನು ಭೇಟಿ ಮಾಡಿದ, ಸಚಿವ ಸಂತೋಷ ಲಾಡ, ಕುಶಲ ವಿಚಾರಿಸಿದರು.

<><><>

ಅಕ್ರಮ ಗಣಿಗಾರಿಕೆಯಿಂದ, ರಾಜ್ಯ ಬೊಕ್ಕಸಕ್ಕೆ ಒಂದೂವರೆ ಲಕ್ಷ ಕೋಟಿ ರೂಪಾಯಿ ನಷ್ಟವಾಗಿದೆ ಎಂದು, ಕಾನೂನು ಖಾತೆ ಸಚಿವ ಎಚ್.ಕೆ. ಪಾಟೀಲ, ಮುಖ್ಯಮಂತ್ರಿ ಅವರಿಗೆ ಪತ್ರ ಬರೆದು, ಸೂಕ್ತ ಕ್ರಮ ಕೈಗೊಳ್ಳುವಂತೆ, ಒತ್ತಾಯಿಸಿದ್ದಾರೆ.

<><><>

ಯಾದಗಿರಿ ಜಿಲ್ಲೆ, ವಡಗೇರಾ ತಾಲೂಕು, ಇಟಗಾ ಎಸ್.ದಲ್ಲಿ, 'ನಮ್ಮ ಗ್ರಾಮ, ಅನೈರ್ಮಲ್ಯ ಮುಕ್ತ' ಹಾಗೂ 'ಹಸಿರು ಧಾಮ' ನಿರ್ಮಾಣ ಕಾರ್ಯಕ್ಕೆ, ಜಿಲ್ಲಾ ಪಂಚಾಯ್ತಿ ಸಿ.ಇ.ಓ. ಲವೀಶ್ ಒರಡಿಯಾ ಚಾಲನೆ ನೀಡಿದರು.

<><><>

ರಾಜ್ಯದ ಗ್ರಾಮೀಣ ಪತ್ರಕರ್ತರಿಗೆ, ಉಚಿತ ಬಸ್‌ಪಾಸ್‌ಗೆ, ಜುಲೈ 1 ರಂದು, ಮುಖ್ಯಮಂತ್ರಿ ಚಾಲನೆ ನೀಡಲಿದ್ದಾರೆ ಎಂದು, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ, ಕೆ.ವಿ. ಪ್ರಭಾಕರ, ಮಲೈ ಮಹಾದೇಶ್ವರ ಬೆಟ್ಟದಲ್ಲಿ, ತಿಳಿಸಿದ್ದಾರೆ.

<><><>

ಚಿಕ್ಕಬಳ್ಳಾಪುರ ಜಿಲ್ಲೆ, ಜಂಗಮಕೋಟೆ ಬಳಿ, ಫಲವತ್ತಾದ ಕೃಷಿ ಭೂಮಿಯಲ್ಲಿ, ಕೈಗಾರಿಕಾ ಪ್ರದೇಶ ಸ್ಥಾಪನೆಗೆ, ರೈತರ ವಿರೋಧವಿದೆ ಎಂದು, ಸಂಸದ ಕೆ.ಸುಧಾಕರ್ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- 11ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ; ಯೋಗ ಸಂಗಮದಲ್ಲಿ, ಸಾಮೂಹಿಕ ಯೋಗ ಪ್ರದರ್ಶನ.
- ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ, 'ಯೋಗ ಮಂದಿರ'ಗಳ ಸ್ಥಾಪನೆಗೆ, ರಾಜ್ಯ ಸರ್ಕಾರ ಚಿಂತನೆ.
- ರಾಜ್ಯದ ಮಾವು ಬೆಳೆಗಾರರ ಸಮಸ್ಯೆಗಳನ್ನು, ಆದ್ಯತೆ ಮೇಲೆ ಪರಿಹರಿಸುವಂತೆ, ಕೇಂದ್ರ ಕೃಷಿ ಸಚಿವರಿಗೆ, ರಾಜ್ಯದ ಮನವಿ.
- ದೇಶದ ಮೊಟ್ಟ ಮೊದಲ, ಮಾ ್ ಮೇಕ್ಸ್ ಬಯೋಚಾರ್ ಘಟಕ, ಉಡುಪಿಯಲ್ಲಿ ಸ್ಥಾಪನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>